# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1341 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ಸಚಿವರು | ಅಬಕಾರಿ ಸಚಿವರು |
| ಉತ್ತರಿಸುವ ದಿನಾಂಕ | 18.12.2025 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ,ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಾರಾಯಿ ಘಟಕಗಳು ಇವೆಯೇ; ಇದ್ದಲ್ಲಿ, ಕಡಿವಾಣ ಹಾಕಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;ಹಾಗೂ ದಾಖಲಾಗಿರುವ ಪ್ರಕರಣಗಳೆಷ್ಟು; (ವಿವರವಾದ ಮಾಹಿತಿ ನೀಡುವುದು) | ಕಲಬುರಗಿ, ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಾರಾಯಿ ಘಟಕಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಳ್ಳಭಟ್ಟಿ ಸಂಬಂಧ ಇಲಾಖೆಯು ಶೂನ್ಯ ಸಹಿಷ್ಣುತೆಯನ್ನು ಹೊಂದಿದ್ದು ಕಳ್ಳಭಟ್ಟಿ ಕೇಂದ್ರಗಳ ಮೇಲೆ ವ್ಯವಸ್ಥಿತವಾಗಿ ಅಬಕಾರಿ ದಾಳಿ ನಡೆಸಿ ಕಳ್ಳಭಟ್ಟಿ ತಯಾರಿಕೆ ಪತ್ತೆ ಹಚ್ಚುವ ಹಾಗೂ ತಡೆಗಟ್ಟುವ ನಿಟ್ಟಿನಲ್ಲಿ ನಿರಂತರ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಕಳ್ಳಭಟ್ಟಿ ತಯಾರಿಕೆಗೆ ಬಳಸಲ್ಪಡುವ ಕಚ್ಚಾ ವಸ್ತುಗಳನ್ನು ಒದಗಿಸುವವರ ಮೇಲೂ ನಿಗಾ ಇಡಲಾಗಿದ್ದು, ಹಿಂದಿನ ಪ್ರಕರಣಗಳ ಪೂರ್ವಾಪರಾಧಿಗಳ ಚಲನ-ವಲನಗಳ ಬಗ್ಗೆ ಅಬಕಾರಿ ಗಸ್ತಿನ ವೇಳೆಯಲ್ಲಿ ನಿಗಾ ಇಡಲಾಗಿದೆ. ಸರ್ಕಾರಿ/ಅರಣ್ಯ ಪ್ರದೇಶಗಳಲ್ಲಿ ಕಳ್ಳಭಟ್ಟಿ ತಯಾರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಂದಾಯ/ಅರಣ್ಯ /ಪೊಲೀಸ್ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಅಕ್ರಮವೆಸಗದಂತೆ ಕ್ರಮ ಜರುಗಿಸಲಾಗಿದೆ. ಹಾಗೆಯೇ ಹೊರ ರಾಜ್ಯಗಳಿಂದ ಅಕ್ರಮವಾಗಿ ಸಾಗಾಟವಾಗುವ ಕಳ್ಳಭಟ್ಟಿ ಸಾರಾಯಿಯನ್ನು ತಡೆಗಟ್ಟಲು ನಿಯಮಿತವಾಗಿ ರಸ್ತೆಗಾವಲು ಮತ್ತು ರಸ್ತೆ ಗಸ್ತು ಕೈಗೊಂಡು ವಾಹನಗಳ ಹಾಗೂ ವ್ಯಕ್ತಿಗಳ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ. ನೆರೆಯ |

| | | |
|---|---|---|
| | | ರಾಜ್ಯಗಳ ಅಬಕಾರಿ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಪೂರ್ವಾಪರಾಧಿಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿ ಜಂಟಿ ಕಾರ್ಯಾಚರಣೆಯನ್ನು ನಡೆಸಲಾಗುತ್ತಿದೆ.<br><br>ಕಳ್ಳಭಟ್ಟಿ ಅಕ್ರಮಗಳಲ್ಲಿ ತೊಡಗುವವರ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಜಾಮೀನಿಯವಲ್ಲದ ಪ್ರಕರಣಗಳನ್ನು ದಾಖಲಿಸಿ ನ್ಯಾಯಲಯಕ್ಕೆ ಹಾಜರು ಪಡಿಸಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕಲಬುರಗಿ,ವಿಜಯಪುರ ಹಾಗೂ ಬೀದರ್ ಜಿಲ್ಲೆಗಳಲ್ಲಿ ಕಳ್ಳಭಟ್ಟಿ ಸಂಬಂಧಿಸಿದಂತೆ ಒಟ್ಟು 348 ಕಳ್ಳಭಟ್ಟಿ ಪ್ರಕರಣಗಳನ್ನು ದಾಖಲಿಸಿ, 2536 ಲೀಟರ್ ಕಳ್ಳಭಟ್ಟಿ ಸಾರಾಯಿಯನ್ನು ಮತ್ತು 980 ಲೀಟರ್ ಬೆಲ್ಲದ ಕೊಳೆಯನ್ನು ವಶಪಡಿಸಿಕೊಳ್ಳಲಾಗಿದೆ. ಇದಕ್ಕೆ ಸಂಬಂಧಿಸಿದವರನ್ನು ದಸ್ತಗಿರಿಗೊಳಪಡಿಸಿ 298 ಆರೋಪಿಗಳನ್ನು ಬಂಧಿಸಿ ಕ್ರಮವಹಿಸಲಾಗಿರುತ್ತದೆ. |
| ಆ) | ರಾಜ್ಯದಲ್ಲಿ ಸಿಎಲ್-2, ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9, ಸಿಎಲ್-11ಸಿ, ಆರ್.ವಿ.ಬಿ ಮತ್ತು ಇತರೆ ಪರವಾನಗಿಗಳನ್ನು ನೀಡಲು ಸರ್ಕಾರವು ಅನುಸರಿಸುತ್ತಿರುವ ಮಾನದಂಡಗಳೇನು: (ಆದೇಶ ಸಹಿತ ಸಂಪೂರ್ಣ ವಿವರ ನೀಡುವುದು): | ರಾಜ್ಯದಲ್ಲಿ ಸಿಎಲ್-2, ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-9, ಸಿಎಲ್-11ಸಿ, ಆರ್.ವಿ.ಬಿ ಮತ್ತು ಇತರೆ ಪರವಾನಗಿಗಳನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳ ವಿವರಗಳನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ. |
| ಇ) | ಒಂದು ಪರವಾನಗಿ ಪಡೆದ ಉದ್ದಿಮೆದಾರರು ಅದೇ ಪರವಾನಗಿಯಡಿಯಲ್ಲಿ ಜಿಲ್ಲೆಯ ಬೇರೆ ಬೇರೆ ಜಾಗಗಳಲ್ಲಿ ಮದ್ಯದಂಗಡಿ ಮತ್ತು ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಅವುಗಳ ವಿವರ ನೀಡುವುದು:ಇವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು: (ವಿವರ ನೀಡುವುದು); | ಒಂದು ಪರವಾನಗಿ ಪಡೆದ ಉದ್ದಿಮೆದಾರರು ಅದೇ ಪರವಾನಗಿಯಡಿಯಲ್ಲಿ ಜಿಲ್ಲೆಯ ಬೇರೆ ಬೇರೆ ಜಾಗಗಳಲ್ಲಿ ಮದ್ಯದಂಗಡಿ ಮತ್ತು ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿರುವುದು ಯಾವುದೂ ಕಂಡುಬಂದಿರುವುದಿಲ್ಲ. |

| | | |
|---|---|---|
| ಈ) | ಸರ್ಕಾರ ನಿಗದಿಪಡಿಸಿರುವ ನಿಯಮಗಳನ್ನು ಉಲ್ಲಂಘನೆ ಮಾಡಿ ಪರವಾನಗಿ ಮಂಜೂರು ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗಿರುವ ಬಗ್ಗೆ,ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ನಿಯಮಗಳನ್ನು ಉಲ್ಲಂಘಿಸಿರುವ ಪ್ರಕರಣಗಳೆಷ್ಟು ಹಾಗೂ ಸದರಿ ಪ್ರಕರಣಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು? (ಪ್ರಕರಣವಾರು ವಿವರ ನೀಡುವುದು) | ಕೆಲವು ಸನ್ನದು ಮಂಜೂರಾತಿ ಪ್ರಕರಣಗಳಲ್ಲಿ ನಿಯಮಗಳನ್ನು ಉಲ್ಲಂಘನೆ ಮಾಡಿ ಪರವಾನಗಿ ಮಂಜೂರು ಮಾಡಿರುವ ಒಟ್ಟು 6 ಪ್ರಕರಣಗಳು ಕಂಡುಬಂದಿದ್ದು, ಈ ಸಂಬಂಧ ಸದರಿ ಆರೋಪಿತ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಚಾಲ್ತಿಯಲ್ಲಿರುತ್ತವೆ. ಪ್ರಕರಣವಾರು ವಿವಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |

**ಆಇ 105 ಇಎಲ್‌ಕ್ಯೂ 2025**

(ಆರ್.ಬಿ.ತಿಮ್ಮಾಪುರ)
**ಅಬಕಾರಿ ಸಚಿವರು**

# ಅನುಬಂಧ-1

1992ನೇ ಸಾಲಿನಿಂದ ಹೊಸದಾಗಿ ಸಿಎಲ್-2 ಮತ್ತು ಸಿಎಲ್-9 ಸನ್ನದನ್ನು ನೀಡಲು ನಿರ್ಬಂಧಿಸಿರುವುದರಿಂದ ಅಬಕಾರಿ ಇಲಾಖೆಯಿಂದ ಹೊಸದಾಗಿ ಯಾವುದೇ ಸಿಎಲ್-2 ಮತ್ತು ಸಿಎಲ್-9 ಸನ್ನದುಗಳ ಮಂಜೂರಾತಿ ನೀಡಲಾಗುತ್ತಿಲ್ಲ. ಪ್ರತಿಯನ್ನು ಅನುಬಂಧ-ಬಿ ರಲ್ಲಿ ಒದಗಿಸಿದೆ.

ರಾಜ್ಯದಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ಸಿಎಲ್-11ಸಿ, ಹೊಂದಿಕೊಂಡಂತೆ ಆರ್.ವಿ.ಬಿ ಮತ್ತು ಇತರೆ ಪರವಾನಗಿಗಳನ್ನು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 3 ಮತ್ತು 5 ರಡಿ ಹೊಸದಾಗಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ.

ಹೊಸದಾಗಿ ಮಂಜೂರು ಮಾಡುವ ಎಲ್ಲಾ ಸನ್ನದುಗಳಿಗೆ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 8, 8-ಎ ರಲ್ಲಿ ನಿಗದಿಪಡಿಸಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ಅರ್ಜಿದಾರರಿಂದ ಪಾವತಿಸಿಕೊಂಡು ಅರ್ಜಿ ಪಡೆಯಲಾಗುತ್ತದೆ. ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ-5 ರನ್ವಯ ಉದ್ದೇಶಿತ ಸನ್ನದಿನ 100 ಮೀಟರ್ ಅಂತರದೊಳಗೆ ಯಾವುದೇ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳು, ಆಸ್ಪತ್ರೆಗಳು (30 ಬೆಡ್‌ಗಳನ್ನು ಹೊಂದಿರುವ ಆಸ್ಪತ್ರೆಗಳು) ಬಹುಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳ ಜನಾಂಗದವರು ವಾಸಿಸುವ ಕಾಲೋನಿಗಳು ಇರುವಂತಿಲ್ಲ. ಯಾವುದೇ ರಾಜ್ಯ ಸರ್ಕಾರದ/ಕೇಂದ್ರ ಸರ್ಕಾರದ ಕಛೇರಿಯಾಗಲೀ ಅಥವಾ ಸ್ಥಳೀಯ ಸಂಸ್ಥೆಗಳ ಕಛೇರಿಯಾಗಲೀ ಅವುಗಳ ಮುಖ್ಯಸ್ಥರು ಗ್ರೂಪ್ "ಎ" ಅಥವಾ ಗ್ರೂಪ್ "ಬಿ" ಅಧಿಕಾರಿಯಾಗಿದ್ದಲ್ಲಿ ಆ ಕಛೇರಿಯು ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುತ್ತದೆ.

ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5(1) ರನ್ವಯ ಆಕ್ಷೇಪಣಾ ಸ್ಥಳವೆಂದು ಪರಿಗಣಿಸಲ್ಪಡುವ ಸ್ಥಳದಲ್ಲಿ ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ:12164-12166/2016 ರ ದಿನಾಂಕ:31-03-2017 ರಲ್ಲಿ ಆದೇಶಿಸಿದಂತೆ 20,000 ಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 500 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ. 20,000 ಮತ್ತು 20,000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ 220 ಮೀಟರ್ (ಸರ್ವೀಸ್ ರಸ್ತೆಯು ಹಾದು ಹೋಗಿದ್ದಲ್ಲಿ ಸರ್ವೀಸ್ ರಸ್ತೆಯ ಅಂಚಿನಿಂದ ಅಥವಾ ರಾಜ್ಯ/ರಾಷ್ಟ್ರೀಯ ಹೆದ್ದಾರಿಯ ಅಂಚಿನಿಂದ) ಅಂತರದಲ್ಲಿ ಯಾವುದೇ ಸನ್ನದನ್ನು ಮಂಜೂರು ಮಾಡುವಂತಿಲ್ಲ.

ಸರ್ಕಾರದ ಪತ್ರ ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018, ದಿನಾಂಕ: 06.08.2020 ರಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯಿತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ

(5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ವಿನಾಯಿತಿಯನ್ನು ನೀಡಲಾಗಿದೆ. ಪ್ರತಿಯನ್ನು ಅನುಬಂಧ–ಸಿ ರಲ್ಲಿ ಒದಗಿಸಿದೆ.

ಮುಂದುವರೆದು, ಸರ್ಕಾರದ ಪತ್ರ ಸಂಖ್ಯೆ:ಆಇ 33 ಇಎಫ್‌ಎಲ್ 2021, ದಿನಾಂಕ:19.01.2022ರಲ್ಲಿ ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್–7(ಎ) ಸನ್ನದುಗಳಿಗೂ ವಿಸ್ತರಿಸಿ ಅನುಮತಿಯನ್ನು ನೀಡಲಾಗಿದೆ. ಪ್ರತಿಯನ್ನು ಅನುಬಂಧ–ಡಿ ರಲ್ಲಿ ಒದಗಿಸಿದೆ.

ಸರ್ಕಾರದ ಪತ್ರ ಸಂಖ್ಯೆ:ಆಇ/11/ಹಿಇಎಸ್/2022, ದಿನಾಂಕ: 13.01.2023ರನ್ವಯ ಅಬಕಾರಿ ಸನ್ನದು ಮಂಜೂರಾತಿ/ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಅಥವಾ ನಿರಾಕ್ಷೇಪಣಾ ಪತ್ರವನ್ನು ಪಡೆಯಲಾಗುತ್ತಿದೆ. ಪ್ರತಿಯನ್ನು ಅನುಬಂಧ–ಇ ರಲ್ಲಿ ಒದಗಿಸಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ/09/ಹಿಇಎಸ್/2022, ದಿನಾಂಕ:16–08–2024 ರಲ್ಲಿ ರಾಜ್ಯ ಹೆದ್ದಾರಿಗಳು ಅಥವಾ ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಅಬಕಾರಿ(ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ಉಪ ನಿಯಮ(1) ನಲ್ಲಿರುವ ಯಾವುದೂ, 2011ರ ಜನಗಣತಿಯನ್ವಯ 3000 ಅಥವಾ ಅದಕ್ಕಿಂತ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ ಗ್ರಾಮ ಪಂಚಾಯತಿ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ನಮೂನೆ 6ಎ ಮತ್ತು ನಮೂನೆ–7 ನಲ್ಲಿ ಮಂಜೂರು ಮಾಡಲಾಗುವ ಹೊಸ ಸನ್ನದುಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ತಿದ್ದುಪಡಿತರಲಾಗಿರುತ್ತದೆ. ಹಾಗೂ ಇದೇ ಉಪ ನಿಯಮ (2) ಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಸರ್ಕಾರಗಳ ಯಾವುದೇ ಕಛೇರಿಯಿಂದ ದೂರದ ಮಾನದಂಡಗಳಿಗೆ ಸಂಬಂಧಿಸಿದಂತೆ ಉಪ ನಿಯಮ (1) ರಲ್ಲಿರುವ ಯಾವುದೂ, ಮಹಾನಗರ ಮಿತಿಯೊಳಗೆ ನಮೂನೆ ಸಿಎಲ್–4, ನಮೂನೆ ಸಿಎಲ್–6ಎ ಮತ್ತು ನಮೂನೆ ಸಿಎಲ್–7 ರಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ಅನ್ವಯಿಸುವುದಿಲ್ಲವೆಂದು ಹಾಗೂ ಮಹಾನಗರ ಮಿತಿಯೊಳಗೆ ಅಸ್ತಿತ್ವದಲ್ಲಿರುವ ನಮೂನೆ ಸಿಎಲ್–4, ನಮೂನೆ ಸಿಎಲ್–6ಎ ಮತ್ತು ನಮೂನೆ ಸಿಎಲ್–7 ಸನ್ನದುಗಳಿಗೆ ಅನ್ವಯಿಸುವುದಿಲ್ಲ ಮತ್ತು ಅಂತಹ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗಿರುತ್ತದೆ ಎಂದು ತಿದ್ದುಪಡಿ ತರಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ:ಆಇ/09/ಹಿಇಎಸ್/2022, ದಿನಾಂಕ:16–08–2024 ರಲ್ಲಿ "ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರಿಗಳ ಯಾವುದೇ ಕಛೇರಿಯಿಂದ ದೂರದ ಮಾನದಂಡಗಳಿಗೆ ಸಂಬಂಧಿಸಿದಂತೆ ಉಪನಿಯಮ 01 ರಲ್ಲಿ ಯಾವುದೂ, ಮಹಾನಗರ ಮಿತಿಯೊಳಗೆ ನಮೂನೆ ಸಿಎಲ್–4 ಅಥವಾ ನಮೂನೆ ಸಿಎಲ್–6ಎ ಮತ್ತು ನಮೂನೆ ಸಿಎಲ್–7 ರಲ್ಲಿ ಮಂಜೂರು ಮಾಡುವ ಹೊಸ ಸನ್ನದುಗಳಿಗೆ ಅನ್ವಯಿಸುವುದಿಲ್ಲ ಹಾಗೂ ಅಸ್ತಿತ್ವದಲ್ಲಿರುವ ನಮೂನೆ ಸಿಎಲ್–4 ಅಥವಾ ನಮೂನೆ ಸಿಎಲ್–6ಎ ಮತ್ತು ನಮೂನೆ ಸಿಎಲ್–7 ರಲ್ಲಿರುವ ಸನ್ನದುಗಳಿಗೆ ಸಹ ಅನ್ವಯಿಸುವುದಿಲ್ಲ, ಮತ್ತು ಅಂತಹ ಸನ್ನದುಗಳನ್ನು ನವೀಕರಿಸಲು ಸಹ ಅನುಮತಿಸಲಾಗಿರುತ್ತದೆ ಎಂದು ತಿದ್ದುಪಡಿ ತರಲಾಗಿರುತ್ತದೆ. ಪ್ರತಿಯನ್ನು ಅನುಬಂಧ–ಎಫ್ ರಲ್ಲಿ ಒದಗಿಸಿದೆ.

ಸಿಎಲ್-2 (ಚಿಲ್ಲರೆ ಮದ್ಯ ಮಾರಾಟ): ಸಿಎಲ್-2 ಸನ್ನದುಗಳಲ್ಲಿ ಮದ್ಯವನ್ನು ಪಾರ್ಸಲ್ ಮೂಲಕ ಮಾತ್ರ ಮಾರಾಟ ಮಾಡಬೇಕಾಗಿರುತ್ತದೆ. ಸನ್ನದು ಆವರಣದಲ್ಲಿ ಕುಡಿಯಲು ಅವಕಾಶವಿರುವುದಿಲ್ಲ.

ಸಿಎಲ್-9 (ಬಾರ್ ಅಂಡ್ ರೆಸ್ಟೋರೆಂಟ್):- ಸಿಎಲ್-9 ಸನ್ನದುಗಳಲ್ಲಿ ಸನ್ನದು ಆವರಣದಲ್ಲಿ ಊಟದೊಂದಿಗೆ ಮದ್ಯವನ್ನು ಸೇವಿಸಲು ಅವಕಾಶವಿದ್ದು ಪಾರ್ಸಲ್ ಮಾರಾಟಕ್ಕೆ ಅವಕಾಶವಿರುವುದಿಲ್ಲ. ಸದರಿ ಸನ್ನದಿನಲ್ಲಿ ಊಟದ ಹಾಲ್ ಕನಿಷ್ಠ 400 ಚದರ ಅಡಿಗಳಿರಬೇಕು. ಅಡಿಗೆ ಕೋಣೆ ಮತ್ತು ಶೌಚಾಲಯಗಳು ಪ್ರತ್ಯೇಕವಾಗಿರಬೇಕು. ಗ್ರಾಹಕರರು ಅಡಿಗೆ ಕೋಣೆಯ ಮೂಲಕ ಶೌಚಾಲಯಕ್ಕೆ ಹೋಗುವಂತೆ ಮಾರ್ಗವು ಇರಬಾರದು. ಪುರುಷ ಮತ್ತು ಮಹಿಳೆಯರ ಪ್ರತ್ಯೇಕ ಶೌಚಾಲಯಗಳು ಇರಬೇಕು.

ಸಿಎಲ್-4 (ಕ್ಲಬ್):- ಸಿಎಲ್-4 ಸನ್ನದನ್ನು ಏಜೆಂಟ್, ಕಾರ್ಯದರ್ಶಿ ಅಥವಾ ಕ್ಲಬ್‌ನ ವ್ಯವಸ್ಥಾಪಕರುಗಳಿಗೆ ಫಾರಂ ಸಿಎಲ್-4 ನಲ್ಲಿ ಸನ್ನದನ್ನು ಜಿಲ್ಲಾಧಿಕಾರಿಗಳು ಮಂಜೂರು ಮಾಡುತ್ತಾರೆ. ಕರ್ನಾಟಕ ಸರ್ಕಾರದ ಸೊಸೈಟಿ ರಿಜಿಸ್ಟ್ರೇಶನ್ ಕಾಯ್ದೆ 1960 (ಕರ್ನಾಟಕ ಆಕ್ಟ್ 17 ಆಫ್ 1960) ಇಂಡಿಯನ್ ಟ್ರಸ್ಟ್ ಕಾಯ್ದೆ 1882, ಕಲಂ 25 ರ ಕಂಪನೀಸ್ ಕಾಯ್ದೆ 1956, ಹಾಗೂ ಕಲಂ 8 ರ ಕಂಪನೀಸ್ ಕಾಯ್ದೆ 2013 ರಡಿ ಕ್ಲಬ್ ಅನ್ನು 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ನೊಂದಾಯಿಸಬೇಕಾಗಿರುತ್ತದೆ ಹಾಗೂ ಕ್ಲಬ್ 100 ಜನ ಖಾಯಂ ಸದಸ್ಯರನ್ನು ಹೊಂದಿರಬೇಕು. ಸ್ವಂತ ಕಟ್ಟಡ ಇಲ್ಲವೇ 11 ವರ್ಷಗಳ ಅವಧಿಗೆ ಕಟ್ಟಡವನ್ನು ಲೀಸ್ ಆಧಾರದ ಮೇಲೆ ಪಡೆದಿರಬೇಕು. ಕ್ಲಬ್‌ನಲ್ಲಿ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳನ್ನು ನಡೆಸಲು ಸೌಲಭ್ಯಗಳನ್ನು ಕಲ್ಪಿಸಬೇಕು. ಕ್ಲಬ್‌ನ ಸದಸ್ಯರುಗಳಿಗೆ ಮದ್ಯ ಹಾಗೂ ಆಹಾರವನ್ನು ಸೇವಿಸಲು ಸೂಕ್ತ ಸೌಲಭ್ಯಗಳನ್ನು ಕಲ್ಪಿಸಬೇಕು. ಪುರುಷರು ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಶೌಚಾಲಯವನ್ನು ನಿರ್ಮಿಸಿ ಹರಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿರಬೇಕು.

ಸಿಎಲ್-5:- ಸಿಎಲ್-5 (ಸಾಂದರ್ಭಿಕ ಸನ್ನದು) ಸಿಎಲ್-5 ಸನ್ನದು ಸಾಂಧರ್ಬಿಕ ಸನ್ನದಾಗಿದ್ದು, ಒಂದು ದಿನಕ್ಕಾಗಿ ಸಾರ್ವಜನಿಕ ಸಮಾರಂಭಗಳಿಗೆ ನೀಡುವ ಸನ್ನದಾಗಿರುತ್ತದೆ. ಇದನ್ನು ಪಡೆಯಲು ಒಂದು ದಿನಕ್ಕೆ ಸನ್ನದು ಶುಲ್ಕ ರೂ.10,000/- ಗಳು ಮತ್ತು ಹೆಚ್ಚುವರಿ ಸನ್ನದು ಶುಲ್ಕ ರೂ.1500/- ಗಳನ್ನು ಪಾವತಿಸಬೇಕು.

ಸಿಎಲ್-6ಎ:- ಸಿಎಲ್-6ಎ ಸನ್ನದು (ಸ್ಟಾರ್ ಹೋಟೆಲ್) ಎಂದರೆ ಆ ಹೋಟೆಲ್ ಭಾರತ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಸ್ಟಾರ್ ಕೆಟಗರಿಯನ್ನು ಪಡೆದಿರಬೇಕಾಗಿರುತ್ತದೆ. ಈ ಪರವಾನಗಿಯನ್ನು ಪಡೆದ ಸನ್ನದುದಾರರು ಸನ್ನದಿನಲ್ಲಿ ತಂಗುವಂತಹ ಗ್ರಾಹಕರಿಗೆ ಮಾತ್ರ ಮದ್ಯವನ್ನು ಸರಬರಾಜು ಮಾಡಬಹುದಾಗಿರುತ್ತದೆ. ಹಾಗೂ ಸನ್ನದಿನಲ್ಲಿ ಒಂದಕ್ಕಿಂತ ಹೆಚ್ಚಿನ ಕೌಂಟರ್‌ಗಳನ್ನು ತೆರೆಯಲು ಅವಕಾಶವಿರುತ್ತದೆ.

ಸಿಎಲ್-7:- ಸನ್ನದು (ಹೋಟೆಲ್ ಮತ್ತು ವಸತಿ ಗೃಹಗಳು) ಎಂದರೆ:- ವಸತಿ ಗೃಹಗಳಲ್ಲಿ ತಂಗುವ ಗ್ರಾಹಕರಿಗೆ ಮತ್ತು ಅವರ ಅತಿಥಿಗಳಿಗೆ ಊಟದೊಂದಿಗೆ ಮದ್ಯವನ್ನು ಸೇವಿಸುವವರಿಗೆ ಮತ್ತು ಸಾಂದರ್ಭಿಕ ಸಂದರ್ಶಕರುಗಳಿಗೆ ಮದ್ಯ ಸೇವಿಸಲು ಅವಕಾಶ ಕಲ್ಪಿಸಬೇಕಾಗಿರುತ್ತದೆ.

ಸಿಎಲ್-7-ಎ:- ಸಿಎಲ್-7ಎ (ಫಾರಂ-14) ಸನ್ನದುಗಳನ್ನು ಕೆ.ಎಸ್.ಟಿ.ಡಿ.ಸಿ ಟೂರಿಸ್ಟ್ ಹೋಟೆಲ್ ಗಳಿಗೆ ನೀಡಲಾಗುತ್ತಿದ್ದು, ಈ ಹೋಟೆಲ್‌ಗಳಲ್ಲಿ ತಂಗುವ ಅತಿಥಿಗಳಿಗೆ ಮದ್ಯವನ್ನು ಮಾರಾಟ ಮಾಡಬಹುದಾಗಿರುತ್ತದೆ.

ಸಿಎಲ್-7ಬಿ:- ಸಿಎಲ್-7ಬಿ (ಫಾರಂ-15) ಸನ್ನದುಗಳನ್ನು ಕೆ.ಎಸ್.ಟಿ.ಡಿ.ಸಿ ಟೂರಿಸ್ಟ್ ಹೋಟೆಲ್ ಗಳಿಗೆ ನೀಡಲಾಗುತ್ತಿದ್ದು, ಈ ಹೋಟೆಲ್‌ಗಳಲ್ಲಿ ತಂಗುವ ಅತಿಥಿಗಳಿಗೆ ಬಿಯರ್ ಅನ್ನು ಮಾತ್ರ ಮಾರಾಟ ಮಾಡಬಹುದಾಗಿರುತ್ತದೆ.

ಸಿಎಲ್-7(ಸಿ):- ಸದರಿ ಸನ್ನದು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ರೈಲುಗಳಲ್ಲಿ ನಿರ್ವಹಿಸಲಾಗುವ Tourism Hotel ಗಳಿಂದ ರೈಲಿನಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಮದ್ಯವನ್ನು ಸರಬರಾಜು ಮಾಡಲು ನೀಡಲಾಗುತ್ತದೆ.

ಸಿಎಲ್-8:- ಸದರಿ ಸನ್ನದು ಮಿಲಿಟರಿ ಕ್ಯಾಂಟಿನ್‌ಗಳಿಗೆ ನೀಡುವ ಸನ್ನದಾಗಿದ್ದು ಈ ಸನ್ನದಿನಲ್ಲಿ ಸಶಸ್ತ್ರ ಪಡೆಗಳ ಸದಸ್ಯರುಗಳಿಗೆ ಮಾರಾಟ ಮಾಡಬಹುದಾಗಿರುತ್ತದೆ.

ಸಿಎಲ್-8ಎ:- ಮಿಲಿಟರಿ ಕ್ಯಾಂಟಿನ್ ಸ್ಟೋರ್ಸ್ ಬಾಂಡೆಡ್ ವೇರ್‌ಹೌಸ್ ಗಳಿಗೆ ನೀಡುವ ಸನ್ನದಾಗಿರುತ್ತದೆ.

ಸಿಎಲ್-8ಬಿ:- ಬಾರ್ಡರ್ ಸೆಕ್ಯೂರಿಟಿ ಪಡೆಗಳು ಮತ್ತು ಪ್ಯಾರಾ ಮಿಲಿಟರಿ ಪಡೆಗಳಿಗೆ ನೀಡುವ ಸನ್ನದಾಗಿರುತ್ತದೆ.

ಸಿಎಲ್-11ಸಿ:- ಸಿಎಲ್-11(ಸಿ) ಸನ್ನದುಗಳನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡಲಾಗಿರುತ್ತದೆ. ಸಿಎಲ್-11(ಸಿ) ಸನ್ನದುಗಳಲ್ಲಿ ಮದ್ಯವನ್ನು ಪಾರ್ಸಲ್ ಮೂಲಕ ಮಾತ್ರ ಮಾರಾಟ ಮಾಡಬೇಕಾಗಿರುತ್ತದೆ. ಸನ್ನದು ಆವರಣದಲ್ಲಿ ಕುಡಿಯಲು ಅವಕಾಶವಿರುವುದಿಲ್ಲ. ಎಂ.ಎಸ್.ಐ.ಎಲ್ ಮದ್ಯದ ಮಳಿಗೆಗಳನ್ನು ಮಂಜೂರು ಮಾಡಲು ಸರ್ಕಾರ ಅನುಸರಿಸುವ ಮಾನದಂಡಗಳು ಕೆಳಕಂಡಂತಿರುತ್ತವೆ:

ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ/07/ಇಎಫ್ಎಲ್/2008 ದಿನಾಂಕ: 03/07/2009 ರಲ್ಲಿ ಪ್ರತಿ ತಾಲ್ಲೂಕಿಗೆ ಕನಿಷ್ಠ 2 ಸನ್ನದುಗಳಂತೆ 352 ಸನ್ನದುಗಳು, ಜಿಲ್ಲಾ ಕೇಂದ್ರಸ್ಥಾನಕ್ಕೆ 2 ರಂತೆ 58 ಸನ್ನದುಗಳು ಹಾಗೂ ಎಂಎಸ್ಐಎಲ್ ಸಂಸ್ಥೆ ಪ್ರಾದೇಶಿಕ ಬೇಡಿಕೆ ಅಧ್ಯಯನ ಆಧರಿಸಿ ಕೋರಿಕೆ ಸಲ್ಲಿಸುವ ಸ್ಥಳಗಳಿಗೆ 53 ಸನ್ನದುಗಳಂತೆ ಒಟ್ಟು 463 ಸನ್ನದುಗಳನ್ನು ಹಂಚಿಕೆ ಮಾಡಲಾಗಿದೆ. ಪ್ರತಿಯನ್ನು ಅನುಬಂಧ-ಜಿ ರಲ್ಲಿ ಒದಗಿಸಿದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಎಫ್ ಡಿ/15/ಇಎಫ್ಎಲ್/ 2015 ದಿ:23-09-2016 ರಲ್ಲಿ ರಾಜ್ಯದ 220 ವಿಧಾನ ಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ 4 ಸನ್ನದುಗಳಂತೆ ಒಟ್ಟು 880, ಯಾದಗಿರಿ ಜಿಲ್ಲೆಯ ನಾಲ್ಕು ವಿಧಾನ ಸಭಾ ಕ್ಷೇತ್ರಗಳಿಗೆ ತಲಾ 5 ರಂತೆ ಒಟ್ಟು 20, ಹೀಗೆ ರಾಜ್ಯದಲ್ಲಿ ಒಟ್ಟಾರೆ 900 ಸಿಎಲ್ 11-ಸಿ ಸನ್ನದುಗಳನ್ನು ಕೆಳಕಂಡ ಷರತ್ತುಗಳನ್ನು ವಿಧಿಸಿ ಎಂ.ಎಸ್.ಐ.ಎಲ್ ಸಂಸ್ಥೆಗೆ ಮಂಜೂರಾತಿ ನೀಡಲು ಸರ್ಕಾರವು ಅನುಮತಿ ನೀಡಿರುತ್ತದೆ. ಪ್ರತಿಯನ್ನು ಅನುಬಂಧ-ಹೆಚ್ ರಲ್ಲಿ ಒದಗಿಸಿದೆ.

i. ಎಂ.ಎಸ್.ಐ.ಎಲ್ ಸಂಸ್ಥೆಯೇ ತನ್ನ ವಾಣಿಜ್ಯ ಕಾರ್ಯಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗಧಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಈ ರೀತಿ ಗುರುತಿಸುವ ಸ್ಥಳಗಳು ಸರ್ಕಾರವು ತಿಳಿಸಿರುವ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲೇ ಇರಬೇಕು ಹಾಗೂ ನಿಗದಿಪಡಿಸಿರುವ ಸಂಖ್ಯೆಯ ಮಿತಿಯಲ್ಲೇ ಇರಬೇಕು.

iii. ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ ವ್ಯಾಪ್ತಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳತಕ್ಕದ್ದು.

ಸರ್ಕಾರದ ಪತ್ರ ಸಂಖ್ಯೆ: ಎಫ್ ಡಿ/08/ಇಎಫ್‌ಎಲ್/2020 ದಿನಾಂಕ: 08-09-2020 ರಲ್ಲಿ ವಿವಿಧ ವಿಧಾನಸಭಾ ಕ್ಷೇತ್ರಗಳಲ್ಲಿ ಬಾಕಿ ಉಳಿದಿರುವ 441 ಸಿಎಲ್-11ಸಿ ಕೋಟಾದಡಿಯಲ್ಲಿನ ಸನ್ನದುಗಳನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ. ಪ್ರತಿಯನ್ನು ಅನುಬಂಧ-ಐ ರಲ್ಲಿ ಒದಗಿಸಿದೆ.

i. ಎಂ.ಎಸ್.ಐ.ಎಲ್ ಸಂಸ್ಥೆಗೆ ತನ್ನ ವಾಣಿಜ್ಯ ಕಾರ್ಯ ಸಾಧ್ಯತೆಗೆ ಅನುಗುಣವಾಗಿ ಸನ್ನದುಗಳ ಸ್ಥಳವನ್ನು ನಿಗದಿಗೊಳಿಸುವುದು. ಎಂ.ಎಸ್.ಐ.ಎಲ್ ಸಂಸ್ಥೆಯ ಅಧಿಕಾರಿಗಳು ಕರ್ನಾಟಕ ಅಬಕಾರಿ ಕಾಯ್ದೆಯನ್ವಯ ಮದ್ಯದಂಗಡಿಗಳನ್ನು ತೆರೆಯುವ ನಿರ್ದಿಷ್ಟ ಸ್ಥಳಗಳನ್ನು ಗುರುತಿಸುವುದು.

ii. ಸಿಎಲ್-11ಸಿ ಕೋಟಾದಲ್ಲಿನ ಬಾಕಿ ಇರುವ 441 ಚಿಲ್ಲರೆ ಮದ್ಯ ಮಾರಾಟ ಸನ್ನದುಗಳ ಪೈಕಿ ಯಾವುದಾದರೂ ಸನ್ನದನ್ನು ಒಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಿಂದ ಮತ್ತೊಂದು ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ವರ್ಗಾವಣೆ ಮಾಡುವುದಾದಲ್ಲಿ ಅದೇ ಜಿಲ್ಲೆಯ ಬೇರೆ ಯಾವುದಾದರೂ ಅಗತ್ಯವಿರುವ ವಿಧಾನಸಭಾ ಕ್ಷೇತ್ರಕ್ಕೆ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳಕ್ಕೆ ವರ್ಗಾವಣೆ ಮಾಡಿಕೊಳ್ಳತಕ್ಕದ್ದು.

iii. ಎಂ.ಎಸ್.ಐ.ಎಲ್ ಸಂಸ್ಥೆಯಿಂದ ಸನ್ನದು ಸ್ಥಳಗಳನ್ನು ಗುರುತಿಸಿ ಅಬಕಾರಿ ಇಲಾಖೆಗೆ ಸಲ್ಲಿಸಿದ ನಂತರ ಅಂತಹಾ ಸನ್ನದು ಸ್ಥಳಗಳು ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 5 ರನ್ವಯ ಆಕ್ಷೇಪಣಾ ರಹಿತ ಸ್ಥಳದಲ್ಲಿರುವಂತೆ ಹಾಗೂ ಇತರೇ ಸಂಬಂಧಿಸಿದ ನಿಯಮಗಳಿಗೆ ಪೂರಕವಾಗಿರುವಂತೆ ಸಂಬಂಧಪಟ್ಟ ಅಬಕಾರಿ ಉಪ ಆಯುಕ್ತರು ನೋಡಿಕೊಳ್ಳುವುದು.

ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್ ಡಿ 65 ಇಡಬ್ಲ್ಯೂಪಿ 2020 ದಿನಾಂಕ: 07-10-2020 ರನ್ವಯ ವಿಧಿಸಿರುವ ಈ ಕೆಳಕಂಡ ಷರತ್ತುಗಳನ್ನು ದೃಢೀಕರಿಸಿಯೇ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚನೆಗಳನ್ನು ನೀಡಲಾಗಿದೆ. ಪ್ರತಿಯನ್ನು ಅನುಬಂಧ-ಜೆ ರಲ್ಲಿ ಒದಗಿಸಿದೆ.

i. ಕರ್ನಾಟಕ ಅಬಕಾರಿ( ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ರ ನಿಯಮ 2ರಲ್ಲಿ ಕರ್ನಾಟಕ ಅಬಕಾರಿ ಕಾಯ್ದೆ 1965 ಅನ್ವಯವಾಗುವ ಎಲ್ಲಾ ಸನ್ನದುಗಳಿಗೆ ಸದರಿ ನಿಯಮಗಳು ಅನ್ವಯವಾಗುವುದಾಗಿ ತಿಳಿಸಿರುವುದರಿಂದ ಸದರಿ ನಿಯಮಗಳು ಎಂ.ಎಸ್.ಐ.ಎಲ್ ಸಂಸ್ಥೆಗೆ ನೀಡುವ ಸನ್ನದುಗಳಿಗೆ ಅನ್ವಯಿಸುತ್ತದೆ.

ii. ಎಂ.ಎಸ್.ಐ.ಎಲ್ ಸಂಸ್ಥೆಯು ಸಿಎಲ್-11ಸಿ ಸನ್ನದುಗಾಗಿ ಸಂಸ್ಥೆಯು ನಿರ್ದೇಶಕರ ಮಂಡಳಿಯಿಂದ ಅಧಿಕೃತಗೊಂಡಿರುವ ವ್ಯಕ್ತಿಯ ಮೂಲಕ ಕಡ್ಡಾಯವಾಗಿ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968 ರ ನಿಯಮ 4 ಹಾಗೂ ನಮೂನೆ ಸಿಎಲ್-1ಎ ರಲ್ಲಿ ನಿಗದಿತ ನಮೂನೆಯಲ್ಲಿ ಘೋಷಣಾ ಪತ್ರದೊಂದಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

iii. ಅರ್ಜಿಯನ್ನು ಸಕ್ಷಮ ಪ್ರಾಧಿಕಾರವಾದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು.

ಸಿಎಲ್–16:– ಸದರಿ ಸನ್ನದು ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಡ್ಯೂಟಿ ಫ್ರೀ ಮದ್ಯ ಮಾರಾಟ ಮಾಡಲು ನೀಡಲಾಗಿರುತ್ತದೆ.

ಸಿಎಲ್–17:– ಸದರಿ ಸನ್ನದು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ದೇಶೀಯ ಮತ್ತು ವಿದೇಶೀಯ ಪ್ರಯಾಣಿಕರಿಗೆ ಮದ್ಯವನ್ನು ಊಟದೊಂದಿಗೆ ಸೇವಿಸಲು ಅವಕಾಶ ನೀಡಲಾಗುತ್ತದೆ.

ಸಿಎಲ್–18:– ಸದರಿ ಸನ್ನದು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ವಿದೇಶಗಳಿಗೆ ಪ್ರಯಾಣಿಸುವ ಪ್ರಯಾಣಿಕರಿಗೆ ಮಾತ್ರ ಮದ್ಯವನ್ನು ಊಟದೊಂದಿಗೆ ಸೇವಿಸಲು ಅವಕಾಶ ನೀಡಲಾಗುತ್ತದೆ.

ವೈನ್ ಟ್ಯಾವರ್ನ್:– ವೈನ್ ಟ್ಯಾವರ್ನ್ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿಯಲ್ಲಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ವೈನ್ ಟ್ಯಾವರ್ನ್ ಸನ್ನದಿನಲ್ಲಿ ಗ್ರಾಹಕರು ಮದ್ಯವನ್ನು ಸೇವಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ವೈನ್ ಬೊಟೀಕ್:– ವೈನ್ ಬೊಟೀಕ್ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಚಿಲ್ಲರೆಯಾಗಿ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಮಾರಾಟ ಮಾಡುವ ಹಕ್ಕು) ನಿಯಮಗಳು 2008 ರಡಿಯಲ್ಲಿನ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ವೈನ್ ಬೊಟೀಕ್ ಸನ್ನದಿನಲ್ಲಿ ಗ್ರಾಹಕರಿಗೆ ವೈನ್‌ನ್ನು ಅಥವಾ ಫೋರ್ಟಿಫೈಡ್ ವೈನ್‌ನ್ನು ಸೀಲ್ ಮಾಡಿದ ಬಾಟಲಿಗಳಲ್ಲಿ ಮಾತ್ರ ಪಾರ್ಸಲ್ ಮೂಲಕ ಮಾರಾಟ ಮಾಡಬಹುದಾಗಿರುತ್ತದೆ.

ಹೊಂದಿಕೊಂಡಂತೆ ಆರ್.ವಿ.ಬಿ:– ಕರ್ನಾಟಕ ಅಬಕಾರಿ(ಲೀಸ್ ಆಫ್ ದಿ ರೈಟ್ ಆಫ್ ರಿಟೇಲ್ ವೆಂಡ್ ಆಫ್ ಬಿಯರ್) ನಿಯಮಗಳು, 1976 ರ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಸಿಎಲ್–4, ಸಿಎಲ್–6ಎ, ಸಿಎಲ್–7, ಸಿಎಲ್–9, ಸಿಎಲ್–17 ಮತ್ತು ಸಿಎಲ್–18 ಸನ್ನದುಗಳಿಗೆ ಹೊಂದಿಕೊಂಡಂತೆ ಆರ್.ವಿ.ಬಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದ್ದು, ಸದರಿ ಸನ್ನದುಗಳಲ್ಲಿ ಬಲ್ಕ್ ಬಿಯರ್ ಅನ್ನು ಊಟದೊಂದಿಗೆ ಸೇವಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ಮೈಕ್ರೋಬ್ರೀವರಿ:– ಮೈಕ್ರೋಬ್ರಿವರಿ ಸನ್ನದುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ಮತ್ತು ಅದರಡಿ ರೂಪಿತವಾಗಿರುವ ಕರ್ನಾಟಕ ಅಬಕಾರಿ (ಬ್ರೀವರಿ) ನಿಯಮಗಳು 1967 ರಡಿಯಲ್ಲಿ ರೂಪಿತವಾಗಿರುವ ನಿಯಮಗಳು ಮತ್ತು ಅಗತ್ಯವಾಗಿ ಕಲ್ಪಿಸಬೇಕಾಗಿರುವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ. ಸಂಬಂಧಪಟ್ಟ ಆದೇಶಗಳನ್ನು ಇದರೊಂದಿಗೆ ಲಗತ್ತಿಸಿದೆ.

ಆಇ 105 ಇಎಲ್‌ಕ್ಯೂ 2025

B. K. BHATTACHARYA
COMMISSIONER AND
SECRETARY TO GOVERNMENT
FINANCE DEPARTMENT

D.O.NO. FD/ /ILT /92

(12)

TELEPHONE NO: 26207
VIDHANA SOUDHA, BANGALORE.

DATE: 5th Dec. 1992

Dear Shri Ponnappa,

You may kindly recollect that soon after assumption of office the Hon'ble Chief Minister had called a meeting on 26.11.1992 which was attended by Shri Bulla Subba Rao, the then Excise Commissioner, Shri Laxminarayana, Deputy Commissioner of Excise (Administration) and myself. Shri Ramlingam, Director General of Police and Shri Chandulal, Commissioner of Police were also present during the first phase of the discussions.

In the first phase the following points had been

1. Complete stoppage of loose sale of IML in CL2 shops (retail shops).

2. Enforcement of the hours of working of CL2 shops/pubs etc.

04045

3. Control over mushrooming of liquor shops on National Highways, near places of religious worships, educational institutions etc.

It was agreed at that meeting that while normal verification of terms and conditions of licences issued to CL2 shops/pubs etc. should be done by the Excise Department and not by the Police Department, police officials are not debarred from enforcing the law when violation of licence conditions may lead to law and order situations or major public disorder.

After the Police Officers left, there were detailed discussions about the enforcement activities in the Excise Department. The Chief Minister specifically directed that -

1. Immediately loose sale of liquor in CL2 shops should be stopped;

2. sale of seconds (non duty paid IML) should be completely stopped;

3. Excise Department should examine how liquor shops near educational institutions, places of religious worships and on National Highways can be shifted/regulated/controlled/eliminated;

Attested
Deputy Commissioner of Excise
Office of the Excise Commissioner
Bangalore.
20/5/11

....2

4. For the time being all releases of rectified spirit/MG alcohol to chemical industries should be stopped. This ban, however, shall not apply to genuine pharmaceutical industries and to Government companies like Mysore Sugar Co., and Mysore Acetate & Chemicals Co. etc. (Please ensure that Mysore Acetate & Chemicals Co. does not suffer on account of non-availability of its raw materials due to this ban). If any other Government organisation is getting allotment of rectified spirit for any bonafide purpose they also need not be brought under this embargo;

5. Issue of retail/wholesale/pubs/Bar licences etc. should be stopped forthwith. A proper survey regarding the number of such licences issued in every District, the need for such licences with reference to the population figure etc. should be made and suitable proposals forwarded to the Government explaining whether there is need for additional liquor shops under any of these categories in any particular District.

The Excise Commissioner was also requested to examine whether there can be some restriction in the hours of working of pubs. It was felt that if the pubs can be kept closed from 2.00 p.m. to 5.00 p.m. (as in the UK), then the practice of young teenage boys and girls patronising the pubs can be controlled to some extent.

The question of fear of declining trend in Excise Revenue during the year 1992-93 and the causes thereof came up for informal discussions in the Cabinet Meeting held on 4.12.1992. On behalf of the Excise Department the Commissioner and Secretary to Government, Finance Department had to give an assurance that all possible methods will be taken to plug the leakages in Excise revenue. Some of the Hon'ble Ministers mentioned that molasses are being misused and they are being diverted specially from Khandasari units to manufacturers of ID liquors. Some of the distilleries are producing rectified spirit out of molasses but not accounting for it, that is another major source of illegal supply of ID liquor/non-duty paid Arrack/non-duty paid IML etc. I had to give an assurance that a very strict vigilance will be maintained on distribution of molasses by the sugar factories, khandasari units etc and also on utilisation of molasses by the distilleries.

COMMISSIONER AND
SECRETARY TO GOVERNMENT
FINANCE DEPARTMENT

TELEPHONE NO: 262078

VIDHANA SOUDHA, BANGALORE-1

DATED..............................

(14) (471)



Reference was made to so-called export of liquor from Karnataka to places like Pondicherry, Mahe , etc. or to neighbouring states of Andhra Pradesh, Tamil Nadu, Kerala by paying nominal duty but actually selling this liquor in Karnataka, thus causing crores of rupees of revenue loss to Government. I assured that every consignment outside the State will be subjected to thorough scrutiny and the Intelligence Wings of the Excise and Commercial Tax Department will work together to prevent revenue loss on this account.

You are aware that Government is expecting a revenue of Rs.600 crores during year 1992-93 and Rs.700 crores during 1993-94 from the Excise Department. The success in fulfilment of our Plan targets which is being substantially increased during 1992-93 and 1993-94 to a large extent depends upon fulfilling the targets of revenue realisation both from the Excise Department and the Commercial Taxes Department.

In the light of the above, I shall be grateful if you could ~~kindly~~ take immediate necessary measures to tighten the enforcement activities of the Departments to implement the directives from the Chief Minister and the suggestions from the Hon'ble Ministers.

I shall be grateful for a detailed reply from you covering all the above points.

With regards,

Yours sincerely,

(B.K. BHATTACHARYA)
Finance Commissioner

Shri K.M. Ponnappa
Excise Commissioner
Bangalore

Deputy Commissioner of Excise (Legal)
Office of the Excise Commissioner
Bangalore.

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ,
ಬೆಂಗಳೂರು, ದಿನಾಂಕ:06-08-2020

ಇವರಿಂದ,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ, ಬೆಂಗಳೂರು.

ಇವರಿಗೆ,
ಅಬಕಾರಿ ಆಯುಕ್ತರು,
ಬೆಂಗಳೂರು.

ಮಾನ್ಯರೇ,

ವಿಷಯ : ಗ್ರಾಮೀಣ ಮತ್ತು ಗ್ರಾಮ ಪಂಚಾಯತಿ ವ್ಯಾಪ್ತಿಯ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳಲ್ಲಿರುವ ಸನ್ನದುಗಳನ್ನು ನವೀಕರಿಸುವ ಬಗ್ಗೆ.

ಉಲ್ಲೇಖ: 1)ಅಬಕಾರಿ ಆಯುಕ್ತರ ಕಛೇರಿ ಪತ್ರ ಸಂಖ್ಯೆ: ಇಸಿಇ/64/ಐ.ಎಂ.ಎಲ್/2019-20 ದಿ:28-07-2020.

2)ಸರ್ಕಾರದ ಪತ್ರ ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018 ದಿ:31-08-2018 ಮತ್ತು ದಿ:18-6-2020.

A-(IML)

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ಪತ್ರದ ಕಡೆಗೆ ಗಮನ ಸೆಳೆಯಲಾಗಿದೆ. ಉಲ್ಲೇಖ(2)ರ ದಿನಾಂಕ:18-06-2020ರ ಪತ್ರದಲ್ಲಿನ ವಿಷಯವನ್ನು ಮರುಪರಿಶೀಲಿಸಿ, 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ/ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ನಂಬುಗೆಯ,

6/8/2020

(ಮಂಜುಳಾ ನಟರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ)

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಆಇ 33 ಇಎಫ್‌ಎಲ್ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು. ದಿನಾಂಕ:19.01.2022

**ಇಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ,
ವಿಧಾನ ಸೌಧ.

**ಇವರಿಗೆ:**
ಆಯುಕ್ತರು,
ಅಬಕಾರಿ ಇಲಾಖೆ,
ಶಾಂತಿನಗರ, ಬೆಂಗಳೂರು.

Office of the Excise Commissioner
BENGALURU - 560 027
28 JAN 2022
ಅಬಕಾರಿ ಆಯುಕ್ತರ ಕಛೇರಿ
ಬೆಂಗಳೂರು - 560 027

**ಮಾನ್ಯರೆ,**

**ವಿಷಯ:** ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್, ಮೇಲುಕಾಮನಹಳ್ಳಿ, ಹಂಗಳ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು ಇವರ ಬಂಡೀಪುರ ಸಫಾರಿ ಲಾಡ್ಜ್‌ಗೆ ನೀಡಿರುವ ಸಿಎಲ್-7ಎ (in the form of CL-14) ಸನ್ನದನ್ನು ಪುನರ್ ಆರಂಭಿಸಲು ವಿನಾಯಿತಿ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ:** 1) ತಮ್ಮ ಪತ್ರ ಸಂಖ್ಯೆ: ಎಕ್ಸೈಸ್/11014/254/2021, ದಿನಾಂಕ:02.11.2021.
2) ಸರ್ಕಾರದ ಪತ್ರ ಸಂಖ್ಯೆ: ಆಇ 36 ಇಡಬ್ಲ್ಯೂಪಿ 2018, ದಿನಾಂಕ: 06.08.2020

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ರ ತಮ್ಮ ಪತ್ರದ ಕಡೆಗೆ ಗಮನ ಸೆಳೆಯಲಾಗಿದೆ. ಉಲ್ಲೇಖಿತ (2)ರ ದಿನಾಂಕ:06.08.2020ರ ಪತ್ರದಲ್ಲಿ 2011ರ ಜನಗಣತಿಯನ್ವಯ 5000 ಅಥವಾ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಗ್ರಾಮ ಪಂಚಾಯತಿ / ಸ್ಥಳೀಯ ಪ್ರದೇಶಗಳ ವ್ಯಾಪ್ತಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಇಕ್ಕೆಲಗಳಲ್ಲಿ ಹೊಸದಾಗಿ ಸಿಎಲ್-6ಎ ಮತ್ತು ಸಿಎಲ್-7 ಸನ್ನದುಗಳಿಗೆ ಮಾತ್ರ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ (5)ರಡಿಯಲ್ಲಿ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ವಿಧಿಸಿರುವ ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಟ್ಟು ನಿಯಮಾನುಸಾರ ಪ್ರಾರಂಭಿಸಲು ನೀಡಿರುವ ವಿನಾಯಿತಿಯನ್ನು ಸರ್ಕಾರದ ರಾಜಸ್ವ ಹಿತದೃಷ್ಟಿಯಿಂದ ಮತ್ತು ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಹೊಸದಾಗಿ ಮಂಜೂರು ಮಾಡುವ ಸಿಎಲ್-7(ಎ) (in the form of CL-14) ಸನ್ನದುಗಳಿಗೂ ವಿಸ್ತರಿಸಲು ಸರ್ಕಾರದ ಅನುಮತಿ ನೀಡಲಾಗಿದೆ ಎಂದು ತಮಗೆ ತಿಳಿಸಲು ನಿರ್ದೇಶಿತಳಾಗಿದ್ದೇನೆ.

ತಮ್ಮ ವಿಶ್ವಾಸಿ,

19/01/2022

(ಮಂಜುಳಾ ನಟರಾಜ್)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಅಬಕಾರಿ)

## ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 11 ಪಿಇಎಸ್ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:13.01.2023.

ಇಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಆರ್ಥಿಕ ಇಲಾಖೆ.

ಇವರಿಗೆ:

ಅಬಕಾರಿ ಆಯುಕ್ತರು,
ಬೆಂಗಳೂರು.

ಮಾನ್ಯರೆ,

ವಿಷಯ: ಅಬಕಾರಿ ಸನ್ನದುಗಳ ಮಂಜೂರಾತಿಯಲ್ಲಿ ಭೂಪರಿವರ್ತನೆ ವಿಷಯದ ಕುರಿತು.

ಉಲ್ಲೇಖ: 1. ತಮ್ಮ ಪತ್ರ ಸಂಖ್ಯೆ:ಇಸಿಇ/01/ಜ.ಐಎಂಎಲ್/2020-21, ದಿನಾಂಕ:27.08.2021 ಮತ್ತು 01.12.2022.

2. ಸರ್ಕಾರದ ಪತ್ರ ಸಂಖ್ಯೆ:ಆಇ 26 ಇಎಫ್ಎಲ್ 2021, ದಿನಾಂಕ:16.04.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1)ರ ತಮ್ಮ ಪತ್ರಗಳ ಕಡೆಗೆ ಗಮನ ಸೆಳೆಯಲಾಗಿದೆ. ಉಲ್ಲೇಖಿತ (2)ರ ದಿನಾಂಕ:16.04.2022ರ ಪತ್ರದಲ್ಲಿನ ಸೂಚನೆಯನ್ನು ಪರಿಷ್ಕರಿಸುತ್ತಾ, ಕರ್ನಾಟಕ ಅಬಕಾರಿ ಕಾಯ್ದೆ, 1965ರಡಿಯ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967 ಮತ್ತು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968ರ ನಿಯಮಗಳಲ್ಲಿ ಅಬಕಾರಿ ಸನ್ನದು ಮಂಜೂರಾತಿ ಅಥವಾ ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಕಟ್ಟಡದ ಸ್ಥಳವು ಭೂ ಪರಿವರ್ತನೆ ಆಗಬೇಕೆಂಬ ಯಾವುದೇ ಉಲ್ಲೇಖವಿರುವುದಿಲ್ಲ.

ಆದಕಾರಣ, ಅಬಕಾರಿ ಸನ್ನದು ಮಂಜೂರಾತಿ/ಸ್ಥಳಾಂತರ ಮಾಡುವ ಸಂದರ್ಭದಲ್ಲಿ ಉದ್ದೇಶಿತ ಸ್ಥಳವು ಗ್ರಾಮ ಠಾಣಾ/ಗ್ರಾಮ ಪಂಚಾಯಿತಿ ಹಾಗೂ ನಗರ ಸ್ಥಳೀಯ ಪ್ರಾಧಿಕಾರ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳಿಗೆ ವಾಣಿಜ್ಯ ಉದ್ದೇಶಕ್ಕಾಗಿ ನಿಗದಿಪಡಿಸಿರುವ ಆಸ್ತಿ ತೆರಿಗೆಯನ್ನು ಪಾವತಿಸಿ, ಸಕ್ಷಮ ಪ್ರಾಧಿಕಾರಗಳು ನೀಡುವ ಉದ್ದಿಮೆ ಪರವಾನಿಗೆ ಪಡೆದಿದ್ದಲ್ಲಿ ಅಥವಾ ನಿರಾಕ್ಷೇಪಣಾ ಪತ್ರವನ್ನು (NOC) ನೀಡಿದ್ದಲ್ಲಿ, ಅಂತಹ ಪ್ರಸ್ತಾವನೆಗಳಿಗೆ ಸನ್ನದು ಮಂಜೂರಾತಿ/ಸ್ಥಳಾಂತರ ಮಂಜೂರು ಮಾಡಲು ಸರ್ಕಾರದ ಅನುಮೋದನೆಯನ್ನು ನೀಡಿದೆ.

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು
ವಿಶೇಷ ರಾಜ್ಯ ಪತ್ರಿಕೆ

| ಭಾಗ - ೪ಎ<br>Part – IVA | ಬೆಂಗಳೂರು, ಶನಿವಾರ, ೧೭, ಆಗಸ್ಟ್, ೨೦೨೪(ಶ್ರಾವಣ, ೨೬, ಶಕವರ್ಷ, ೧೯೪೬)<br>BENGALURU, SATURDAY, 17, AUGUST, 2024(SHRAVANA, 26, SHAKAVARSHA, 1946) | ಸಂ. ೩೯೯<br>No.399 |
|---|---|---|


## GOVERNMENT OF KARNATAKA

No. FD 9 PES 2022

Karnataka Government Secretariat
Vidhana Soudha,
Bengaluru, Dated: 16th August 2024

## NOTIFICATION- I

Whereas the draft of the following rules further to amend the Karnataka Excise (General Conditions of Licences) Rules, 1967, was published as required by sub-section (1) of Section 71 of the Karnataka Excise Act, 1965 (Karnataka Act 21 of 1966) in Notification-I No: FD 9 PES 2022, dated: 09.01.2023 in Part-IV A of the Karnataka Gazette (Extraordinary) No.09 dated:09.01.2023 inviting objections and suggestions from all persons likely to be affected within thirty days from the date of its publication in the official Gazette.

And, whereas the said Gazette was made available to the public on 10th January 2023.

And, whereas objections and suggestions received in respect of the said draft by the State Government have been considered.

Now, therefore, in exercise of the powers conferred by Section 71 of the Karnataka Excise Act, 1965 (Karnataka Act 21 of 1966), the Government of Karnataka hereby makes the following rules, namely:-

## RULES

**1. Title and commencement:-** (1) These rules may be called the Karnataka Excise (General Conditions of Licences) (Amendment) Rules, 2024.

(2) They shall come into force from the date of their final publication in the official Gazette.

